

57

ಹರಡುಗಂಟಿಗಿಂತ ಕೆಳಗೆ ಬಟ್ಟೆಯನ್ನು ಇಳಿಬಿಡುವುದು ನಿಷಿದ್ಧ

حكم إسبال الثياب

الحركة النصيحة الإسلامية

ANNASEEHA ISLAMIC MOVEMENT

SURATKAL, MANGALORE - 575014

ಕಾಲಿನ ಹರಡುಗಂಟಿಗಿಂತ ಕೆಳಗೆ ಬಟ್ಟೆ ಇಳಿಬಿಡುವುದು

ಅಬೂ ಹುರೈರ(ರ) ರಿಂದ ವರದಿ: ಪ್ರವಾದಿ(ಸ) ಹೇಳಿದರು:

«مَا أَسْفَلَ مِنَ الْكَعْبَيْنِ مِنَ الْإِزَارِ فَفِي النَّارِ»

“ಕಾಲಿನ ಹರಡುಗಂಟುಗಳಿಗಿಂತ ಕೆಳಗಿರುವ ಬಟ್ಟೆ ನರಕದಲ್ಲಾಗಿದೆ.” (ಬುಖಾರಿ 5787)

ಇಸ್ಲಾಮ್ ಧರ್ಮವು ಎಲ್ಲವನ್ನೂ ಸಮಗ್ರವಾಗಿ ಒಳಗೊಳ್ಳುವ ಧರ್ಮವಾಗಿದೆ. ಅದು ಜೀವನದ ಎಲ್ಲಾ ಕೋನಗಳನ್ನೂ ಆವರಿಸುವ ವಿಚಾರಧಾರೆಯಾಗಿದೆ. ಮನುಷ್ಯರಿಗೆ ಒಳಿತಾಗಿರುವುದೆಲ್ಲವೂ, ಐಹಿಕ ಮತ್ತು

ಧಾರ್ಮಿಕ ವಿಷಯಗಳಲ್ಲಿ ಅವರಿಗೆ ಪ್ರಯೋಜನವಿ-ರುವುದೆಲ್ಲವೂ ಇಸ್ಲಾಮ್ ಧರ್ಮದಲ್ಲಿದೆ. ಮನುಷ್ಯರು ಹೇಗೆ ಬಟ್ಟೆ ಧರಿಸಬೇಕು ಎನ್ನುವುದು ಕೂಡ ಇದರಲ್ಲಿ ಒಳಪಡುತ್ತದೆ.

ಮೇಲಿನ ಹದೀಸಿನಲ್ಲಿ ಪ್ರವಾದಿ(ಸ) ರವರು ಹೇಗೆ ಬಟ್ಟೆ ಧರಿಸಬೇಕೆಂದು ಹೇಳುತ್ತಾರೆ. ಬಟ್ಟೆ ಧರಿಸುವಾಗ ಅದು ಕಾಲಿನ ಹರಡುಗಂಟಿಗಿಂತ ಕೆಳಗೆ ಹೋಗಬಾರದು. ಹರಡುಗಂಟು ಎಂದರೆ ಕಣಕಾಲನ್ನು ಮತ್ತು ಪಾದವನ್ನು ಬೇರ್ಪಡಿಸುವ ಸಂಧಿ. ಈ ರೀತಿ ಕಾಲಿನ ಹರಡು-ಗಂಟಿಗಿಂತ ಕೆಳಗೆ ಬಟ್ಟೆ ಧರಿಸಿದರೆ ಬಟ್ಟೆ ಧರಿಸಿದಾತ ನರಕಾಗ್ನಿಯಲ್ಲಿ ಅದರ ಶಿಕ್ಷೆಯನ್ನು ಪಡೆಯುತ್ತಾನೆ.

ಪ್ರವಾದಿ(ಸ) ರವರು ಕೆಟ್ಟ ಗುಣಗಳ ಬಗ್ಗೆ ಮತ್ತು ಕೆಟ್ಟ ಕೃ-ತ್ಯಗಳ ಬಗ್ಗೆ ಪದೇ ಪದೇ ಎಚ್ಚರಿಕೆ ನೀಡುತ್ತಿದ್ದರು. ಅಬೂ ಝರ್(ರ) ರಿಂದ ವರದಿಯಾದ ಒಂದು ಹದೀಸಿನಲ್ಲಿ ಪ್ರವಾದಿ(ಸ) ರವರು ಹೇಳುತ್ತಾರೆ:

«ثَلَاثَةٌ لَا يُكَلِّمُهُمُ اللَّهُ يَوْمَ الْقِيَامَةِ وَلَا يَنْظُرُ إِلَيْهِمْ وَلَا يُزَكِّيهِمْ وَلَهُمْ عَذَابٌ أَلِيمٌ».

"ಮೂರು ಜನರು, ಪುನರುತ್ಥಾನ ದಿನ ಅಲ್ಲಾಹು ಅವರೊಡನೆ ಮಾತನಾಡಲಾರ, ಅವರನ್ನು ನೋಡಲಾರ ಮತ್ತು ಅವರನ್ನು ಸಂಸ್ಕರಿಸಲಾರ. ಅವರಿಗೆ ಯಾತನಾಮಯ ಶಿಕ್ಷೆಯಿದೆ." ಪ್ರವಾದಿ(ಸ) ರವರು ಇದನ್ನು ಮೂರು ಸಲ ಪುನರಾವರ್ತಿಸಿದರು. ಆಗ ಅಬೂ ಝರ್(ರ) ಕೇಳಿದರು:

خَابُوا وَخَسِرُوا، مَنْ هُمْ يَا رَسُولَ اللَّهِ؟

"ಅವರು ಸೋತರು! ಅವರು ನಷ್ಟಹೊಂದಿದರು! ಅಲ್ಲಾಹನ ಸಂದೇಶವಾಹಕರೇ, ಅವರು ಯಾರು?" ಪ್ರವಾದಿ(ಸ) ಉತ್ತರಿಸಿದರು:

«الْمُسْبِلُ، وَالْمَنَّانُ، وَالْمُنَفِّقُ سِلْعَتَهُ

بِالْحَلِفِ الْكَاذِبِ»

“(ಕಾಲಿನ ಹರಡುಗಂಟಿಗಿಂತ ಕೆಳಗೆ) ಬಟ್ಟೆ ಇಳಿಬಿಡು-ವವರು, ಉಪಕಾರ ಮಾಡಿದ್ದನ್ನು ಎತ್ತಿ ಹೇಳುವವರು ಮತ್ತು ಸುಳ್ಳು ಆಣೆ ಹಾಕಿ ಸರಕುಗಳನ್ನು ಮಾರಾಟ ಮಾಡುವವರು.” (ಮುಸ್ಲಿಂ 106)

ಪುನರುತ್ಥಾನ ದಿನ ಅಲ್ಲಾಹು ಮಾತನಾಡದ, ನೋಡದ ಮತ್ತು ಸಂಸ್ಕರಿಸದ ಮೂರು ವಿಧ ಜನರ ಬಗ್ಗೆ ಪ್ರವಾದಿ(ಸ) ರವರು ಈ ಹದೀಸಿನಲ್ಲಿ ಹೇಳುತ್ತಾರೆ. ಅವರು ಇಹಲೋಕದಲ್ಲಿ ಮಾಡಿದ ಅಪರಾಧಕ್ಕಾಗಿ ಅವರನ್ನು ಶಿಕ್ಷಿಸಲಾಗುತ್ತಿದೆ. ಆ ಮೂವರಲ್ಲಿ ಮೊದಲನೆ ವಿಧದ ಜನರು ಯಾರೆಂದರೆ ತಮ್ಮ ಬಟ್ಟೆಯನ್ನು ನೆಲದಲ್ಲಿ ಎಳೆದುಕೊಂಡು ನಡೆಯುವವರು. ಎರಡನೆಯ ವಿಧದವರು ತಾವು ಮಾಡಿದ ಉಪಕಾರವನ್ನು ಎತ್ತಿ ಹೇಳಿ ಹಂಗಿಸುವವರು ಮತ್ತು ಕಿರುಕುಳ ಕೊಡುವವರು. ಮೂರನೆಯ ವಿಧದವರು ಸುಳ್ಳು ಆಣೆ ಹಾಕಿ ತಮ್ಮ



ಸರಕುಗಳನ್ನು ಮಾರಾಟ ಮಾಡುವವರು.

☆ ಅಹಂಕಾರದಿಂದ ಬಟ್ಟೆಯನ್ನು ಇಳಿಬಿಡುವುದು:

ಬಟ್ಟೆಯನ್ನು ಕಾಲಿನ ಹರಡುಗಂಟಿಗಿಂತ ಕೆಳಗೆ ಇಳಿಬಿಟ್ಟು ಅದನ್ನು ಎಳೆದುಕೊಂಡು ನಡೆಯುವುದು ಅಹಂಕಾರ-ದಿಂದಾದರೆ ಅದು ನಿಷಿದ್ಧವಾಗಿದೆ ಎಂಬ ವಿಷಯದಲ್ಲಿ ಯಾವುದೇ ವಿದ್ವಾಂಸರಿಗೂ ಭಿನ್ನಾಭಿಪ್ರಾಯವಿಲ್ಲ. ಏಕೆಂದರೆ ಇಬ್ನ್ ಉಮರ್(ರ) ರಿಂದ ವರದಿಯಾದ ಹದೀಸಿನಲ್ಲಿ ಪ್ರವಾದಿ(ಸ) ಹೇಳುತ್ತಾರೆ:

«مَنْ جَرَّ ثَوْبَهُ خُيَلَاءَ، لَمْ يَنْظُرِ اللَّهُ إِلَيْهِ يَوْمَ

الْقِيَامَةِ».

"ಯಾರು ಅಹಂಭಾವದಿಂದ ತಮ್ಮ ಬಟ್ಟೆಯನ್ನು ನೆಲದ-ಲ್ಲಿ ಎಳೆದುಕೊಂಡು ಹೋಗುತ್ತಾರೋ ಪುನರುತ್ಥಾನ ದಿನ ಅಲ್ಲಾಹು ಅವರನ್ನು ನೋಡಲಾರ." (ಬುಖಾರಿ 3665, ಮುಸ್ಲಿಂ 2085)

ಜಾಬಿರ್(ರ) ರಿಂದ ವರದಿ: ಪ್ರವಾದಿ(ಸ) ಹೇಳಿದರು:

«إِيَّاكَ وَإِسْبَالَ الْإِزَارِ! فَإِنَّهَا مِنَ الْمَخِيلَةِ، وَإِنَّ اللَّهَ لَا يُحِبُّ الْمَخِيلَةَ».

"ಬಟ್ಟೆಯನ್ನು (ಹರಡುಗಂಟಿಗಿಂತ ಕೆಳಗೆ) ಇಳಿಬಿ-ಡುವುದರ ಬಗ್ಗೆ ಎಚ್ಚರ ವಹಿಸಿರಿ. ಏಕೆಂದರೆ ಅದು ಅಹಂಭಾವವಾಗಿದೆ. ಖಂಡಿತವಾಗಿಯೂ ಅಲ್ಲಾಹು ಅಹಂಭಾವವನ್ನು ಇಷ್ಟಪಡುವುದಿಲ್ಲ." (ಅಬೂದಾವೂ-ದ್ 4084, ಬೈಹಕಿ 21623)

ಸರ್ವಶಕ್ತನಾದ ಅಲ್ಲಾಹು ಅಹಂಭಾವ ಪಡುವವನಾಗಿದ್ದಾನೆ. ಅಹಂಭಾವ ಎಂಬ ಗುಣ ಅವನಿಗೆ ಮಾತ್ರ ಸೀಮಿತವಾಗಿದೆ. ಅಹಂಭಾವವು ಅವನ ಸಂಪೂರ್ಣತೆಯಲ್ಲಿ ಒಳಪಟ್ಟದ್ದಾಗಿದೆ. ಆದ್ದರಿಂದ ಅವನಿಗೆ ಸಂಬಂಧಿಸಿದಂತೆ ಅಹಂಭಾವಪಡುವುದು ಪ್ರಶಂಸನೀಯ ಗುಣವಾಗಿದೆ. ಆದರೆ ಸೃಷ್ಟಿಗಳಿಗೆ (ಮನುಷ್ಯರಿಗೆ) ಸಂಬಂಧಿಸಿದಂತೆ ಅಹಂಭಾವವು ಕೆಟ್ಟ ಗುಣವಾಗಿದೆ. ಸೃಷ್ಟಿಗಳು ಅಹಂಭಾವಪಡುವುದನ್ನು, ಅಹಂಕಾರದಿಂದ ವರ್ತಿಸುವುದನ್ನು ಅಲ್ಲಾಹು ಇಷ್ಟಪಡುವುದಿಲ್ಲ. ಅಹಂಭಾವಪಡುವವರಿಗೆ ಅವನು ಸ್ಪಷ್ಟವಾದ ಎಚ್ಚರಿಕೆಯನ್ನು ನೀಡಿದ್ದಾನೆ. ಈ ಮೇಲಿನ ಹದೀಸ್‌ಗಳು ಅವುಗಳಲ್ಲಿ ಸೇರಿದ್ದಾಗಿದೆ.

ಕಾಲಿನ ಹರಡುಗಂಟಿಗಿಂತ ಕೆಳಗೆ ಬಟ್ಟೆ ಇಳಿಬಿಡುವುದು ಅಹಂಕಾರವಾಗಿದೆಯೆಂದು ಪ್ರವಾದಿ(ಸ) ರವರು ಸ್ಪಷ್ಟವಾಗಿ ಹೇಳಿದ್ದಾರೆ. ಆದರೆ ಇಂದು ಕೆಲವರು ನಮಗೆ

ಅಹಂಭಾವವಿಲ್ಲ ಎಂದು ಹೇಳುತ್ತಾ ಬಟ್ಟೆಯನ್ನು ಕಾಲಿನ ಪಾದದ ಅಡಿಯಲ್ಲಿ ಎಳೆದುಕೊಂಡು ನಡೆಯುತ್ತಾರೆ. ಇದು ಈ ಹದೀಸಿಗೆ ವಿರುದ್ಧವಾಗಿದೆಯೆಂದು ಬೇರೆಯೇ ಹೇಳಬೇಕಾಗಿಲ್ಲ.

ಅಹಂಭಾವದಿಂದ ಬಟ್ಟೆಯನ್ನು ನೆಲದಲ್ಲಿ ಎಳೆದುಕೊಂ-ಡು ನಡೆಯುವುದು ನಿಷಿದ್ಧವಾಗಿದೆ ಎಂಬ ವಿಷಯದಲ್ಲಿ ಹನಫಿ (ಅಲ್‌ಫತಾವಲ್ ಹಿಂದಿಯ್ಯ 5/333), ಮಾಲಿಕಿ (ಮವಾಹಿಬುಲ್ ಜಲೀಲ್ 1/220, ಹಾಶಿಯತುಲ್ ಬಗವಿ ಅಲಾ ಕಿಫಾಯತಿ ತ್ತಾಲಿಬಿ ರ್‍ರಬ್ಬಾನಿ 2/452) ಶಾಫಿಈ (ಅಲ್‌ಮಜ್ಮೂಅ್ 4/454, ರೌದತು ತ್ತಾಲಿ-ಬೀನ್ 2/69) ಮತ್ತು ಹಂಬಲಿ (ಶರ್ಹ್ ಮುಂತಹಲ್ ಇರಾದಾತ್ 1/158, ಕಶ್ಶಾಫುಲ್ ಕಿನಾಅ್ 1/277) ವಿದ್ವಾಂಸರು ಒಮ್ಮತಾಭಿಪ್ರಾಯದಲ್ಲಿದ್ದಾರೆ.

☆ ಅಹಂಕಾರದಿಂದಲ್ಲದೆ ಬಟ್ಟೆಯನ್ನು ಇಳಿಬಿಡುವುದು:

ಅಹಂಕಾರದಿಂದಲ್ಲದೆ ಬಟ್ಟೆಯನ್ನು ಹರಡುಗಂಟಿಗಿಂತ ಕೆಳಗೆ ಇಳಿಬಿಟ್ಟು ನಡೆಯುವುದು ಕೂಡ ನಿಷಿದ್ಧವಾಗಿದೆ. ವಿದ್ವಾಂಸರು ಈ ವಿಷಯದಲ್ಲಿ ಸ್ಪಷ್ಟವಾಗಿ ಎಚ್ಚರಿಕೆ ನೀಡಿದ್ದಾರೆ.

ಇಬ್ನ್ ಹಝ್ಮ್ ಹೇಳುತ್ತಾರೆ: “ಯಾರ ಬಟ್ಟೆಯು ಹರಡುಗಂಟಿಗಿಂತ ಕೆಳಗೆ ಹೋಗಿದೆಯೋ, ಅವನು ಅದನ್ನು ಎತ್ತಿಕಟ್ಟುವುದು ಕಡ್ಡಾಯವಾಗಿದೆ.” (ಅಲ್‌ಮುಹಲ್ಲಾ 2/392)

ಇಬ್ನುಲ್ ಅರಬಿ ಹೇಳುತ್ತಾರೆ: “ಒಬ್ಬ ವ್ಯಕ್ತಿ ಧರಿಸುವ ಬಟ್ಟೆ ಅವನ ಹರಡುಗಂಟಿಗಿಂತ ಕೆಳಗೆ ಹೋಗಬಾರದು. ಹದೀಸಿನಲ್ಲಿ ಹೇಳಿರುವುದು ಅಹಂಕಾರದಿಂದ ಬಟ್ಟೆಯನ್ನು ಇಳಿಬಿಡುವವರ ಬಗ್ಗೆಯಾಗಿದೆ. ಆದರೆ ನನಗೆ

ಅಹಂಕಾರವಿಲ್ಲ ಎಂದು ಹೇಳುವುದರಲ್ಲಿ ಅರ್ಥವಿಲ್ಲ. ಹದೀಸಿಲ್ಲಿರುವ ಪದಗಳನ್ನು ಅವಲಂಬಿಸಿ ನಾನು ಆ ಹದೀಸಿನಲ್ಲಿ ಎಚ್ಚರಿಕೆ ನೀಡಲಾದವರಲ್ಲಿ ಸೇರುವುದಿಲ್ಲ, ಆದ್ದರಿಂದ ನನಗೆ ಅದು ಅನ್ವಯವಾಗುವುದಿಲ್ಲ ಎಂದು ಹೇಳುವುದು ಶರೀಅತ್ತಿಗೆ ವಿರುದ್ಧವಾಗಿದೆ. ಈ ರೀತಿ ವಾದ ಮಾಡುವವರು ವಾಸ್ತವವಾಗಿ ಬಟ್ಟೆಯನ್ನು ಇಳಿಬಿಡುವುದು ಅಹಂಕಾರದಿಂದಲೇ ಆಗಿದೆ. ಅವರು ಸುಳ್ಳು ಹೇಳುವುದು ಇಲ್ಲಿ ಸ್ಪಷ್ಟವಾಗಿ ಗೋಚರಿಸುತ್ತದೆ." (ಆರಿದತುಲ್ ಅಹ್ವಝಿ 7/238)

ಇಬ್ನ್ ಹಜರ್ ಅಸ್ಕಲಾನಿ ಹೇಳುತ್ತಾರೆ: "ಅಹಂಭಾ-ವದಿಂದ ಬಟ್ಟೆಯನ್ನು (ಹರಡುಗಂಟಿಗಿಂತ ಕೆಳಗೆ) ಇಳಿಬಿಡುವುದು ಮಹಾಪಾಪವಾಗಿದೆಯೆಂದು ಈ ಹದೀಸ್‌ಗಳಿಂದ ಸ್ಪಷ್ಟವಾಗುತ್ತದೆ. ಬಟ್ಟೆಯನ್ನು ಇಳಿಬಿ-ಡುವುದು ಅಹಂಕಾರದಿಂದಲ್ಲದಿದ್ದರೂ ಹದೀಸ್‌ಗಳ ಬಾಹ್ಯಾರ್ಥದ ಪ್ರಕಾರ ಅದು ನಿಷಿದ್ಧವಾಗಿದೆ." (ಫತ್ಹುಲ್

ಬಾರಿ 10/263)

ಈ ವಿಷಯದಲ್ಲಿ ಅಸ್ಸುನ್ಆನಿಯವರು 'ಇಸ್ತೀಫಾಉಲ್ ಅಕ್ವಾಲ್ ಫೀ ತಹ್ರೀಮಿಲ್ ಇಸ್ಬಾಲ್ ಅಲರ್ರಿಜಾಲ್' ಎಂಬ ಪುಸ್ತಕವನ್ನು ಬರೆದಿದ್ದಾರೆ. ಅದರಲ್ಲಿ ಅವರು ಅಹಂಕಾರ-ದಿಂದಲ್ಲದಿದ್ದರೂ ಬಟ್ಟೆಯನ್ನು ಹರಡು ಗಂಟಿಗಿಂತ ಕೆಳಗೆ ಇಳಿಬಿಟ್ಟು ನಡೆಯುವುದು ನಿಷಿದ್ಧವೆಂದಿದ್ದಾರೆ.

ಇಬ್ನ್ ಬಾಝ್ ಹೇಳುತ್ತಾರೆ: "ಪುರುಷರು ಬಟ್ಟೆಯನ್ನು (ಹರಡುಗಂಟಿಗಿಂತ ಕೆಳಗೆ) ಇಳಿಬಿಡಬಾರದೆಂದು ಈ ಎರಡು ಹದೀಸ್‌ಗಳು ವಿವರಿಸುತ್ತವೆ. ಇನ್ನು ಹಾಗೆ ಇಳಿಬಿಡುವುದು ಅಹಂಕಾರದಿಂದಾದರೆ ಅದರ ಪಾಪವು ಗಂಭೀರವಾಗುತ್ತದೆ ಮತ್ತು ಆ ಅಪರಾಧವು ತೀಕ್ಷ್ಣವಾ-ಗುತ್ತದೆ." (ಫತಾವಾ ಇಬ್ನ್ ಬಾಝ್ 8/275)

ಇಬ್ನ್ ಉಸೈಮೀನ್ ಹೇಳುತ್ತಾರೆ: "ಸರಿಯಾದ ಅಭಿ-ಪ್ರಾಯ ಪ್ರಕಾರ ಅದು ನಿಷಿದ್ಧವಾಗಿದೆ. ಅದು ಅಹಂ-

ಭಾವದಿಂದಾದರೂ ಅಲ್ಲದಿದ್ದರೂ ಸಹ. ಮಾತ್ರವಲ್ಲ, ಸರಿಯಾದ ಅಭಿಪ್ರಾಯ ಪ್ರಕಾರ ಅದು ಮಹಾಪಾಪವೂ ಆಗಿದೆ." (ಶರ್ಹ್ ರಿಯಾದು ಸ್ವಾಲಿಹೀನ್ 4/287)

ಒಟ್ಟಿನಲ್ಲಿ, ಬಟ್ಟೆಯನ್ನು ಹರಡುಗಂಟಿಗಿಂತ ಕೆಳಗೆ ಎಳೆ-ಯುತ್ತಾ ನಡೆಯುವುದು ನಿಷಿದ್ಧವಾಗಿದೆ ಎನ್ನುವುದರಲ್ಲಿ ಸಂಶಯವಿಲ್ಲ. ತಾನು ಅಹಂಕಾರದಿಂದ ಮಾಡುವುದಿಲ್ಲ ಎಂದು ಹೇಳುವವರ ಮಾತೇ ಅವರು ಅಹಂಕಾರದಿಂದ ಮಾಡುತ್ತಿದ್ದಾರೆ ಎನ್ನುವುದಕ್ಕೆ ಪುರಾವೆಯಾಗಿದೆ. ಅವರಿಗೆ ಅಹಂಕಾರವಿಲ್ಲದಿದ್ದರೆ ಅವರಿಗೆ ಅದನ್ನು ಎತ್ತಿಕಟ್ಟಬಹುದಾಗಿದೆ. ಕೆಲವರು ಇದಕ್ಕೆ ಈ ಕೆಳಗಿನ ಹದೀಸನ್ನು ಆಧಾರವಾಗಿ ತೋರಿಸುತ್ತಾರೆ.

فَقَالَ أَبُـو بَكْرٍ: إِنَّ أَحَـدَ شِقَّيْ ثَوْبِي يَسْتَرْخِي، إِلَّا أَنْ أَتَعَاهَدَ ذَلِكَ مِنْهُ؟ فَقَالَ رَسُولُ اللَّهِ صَلَّى اللَّهُ عَلَيْهِ وَسَلَّمَ: «إِنَّكَ

لَسْتَ تَصْنَعُ ذَلِكَ خُيَلَاءَ».

ಆಗ ಅಬೂಬಕರ್(ರ) ಹೇಳಿದರು: "ನನ್ನ ಬಟ್ಟೆಯ ಒಂದು ಅಂಚು ನಾನು ಅದರ ಬಗ್ಗೆ ಗಮನ ನೀಡದಿದ್ದರೆ ನೆಲದಲ್ಲಿ ಇಳಿಯುತ್ತದೆ." ಆಗ ಪ್ರವಾದಿ(ಸ) ರವರು ಹೇಳಿದರು: "ತಾವು ಹಾಗೆ ಮಾಡುವುದು ಅಹಂಭಾವ-ದಿಂದಲ್ಲ." (ಬುಖಾರಿ 3665)

ಅಬೂಬಕರ್(ರ) ಹೇಳುವುದು ನಾನು ಗಮನ ನೀಡದಿದ್ದರೆ ನನ್ನ ಬಟ್ಟೆ ನೆಲದಲ್ಲಿರುತ್ತದೆ. ಅಂದರೆ ನಾನು ಅದನ್ನು ನೆಲದಲ್ಲಿ ಎಳೆದುಕೊಂಡು ನಡೆಯುತ್ತೇನೆ ಎಂದಾಗಿದೆ. ಇದರ ಅರ್ಥ, ಅವರ ಬಟ್ಟೆಯ ಒಂದು ಅಂಚು ನೆಲದಲ್ಲಿರುವುದನನು ಅವರು ಗಮನಿಸಿದರೆ ಅವರು ಅದನ್ನು ಎತ್ತಿ ನಡೆಯುತ್ತಾರೆ ಎಂದಾಗಿದೆ. ಇನ್ನು ಕೆಲವೊಮ್ಮೆ ತರಾತುರಿಯಲ್ಲಿ ಅದರ ಕಡೆಗೆ ಗಮನ ನೀಡದೆ ಎಳೆದುಕೊಂಡು ಹೋಗುತ್ತಾರೆ ಎಂದಾಗಿದೆ. ಈ ಕಾರಣದಿಂದಲೇ ಪ್ರವಾದಿ(ಸ) ಹೇಳುತ್ತಾರೆ: ನೀವು ಹಾಗೆ

ಮಾಡುವುದು ಅಹಂಕಾರದಿಂದಲ್ಲ. ಬದಲಾಗಿ ನಿಮ್ಮ ಗಮನ ತಪ್ಪಿದಾಗ ಮಾತ್ರ ಹಾಗೆ ಸಂಭವಿಸುತ್ತದೆ.

ಒಟ್ಟಿನಲ್ಲಿ, ಬಟ್ಟೆಯನ್ನು ಪಾದದ ಅಡಿಭಾಗದಲ್ಲಿ ಎಳೆದು-ಕೊಂಡು ಹೋಗುವವರು ತಾವು ಇದನ್ನು ಮಾಡುವುದು ಅಹಂಕಾರದಿಂದಲ್ಲ ಎಂದು ಹೇಳಿದರೂ ಅವರಿಗೆ ಈ ಹದೀಸಿನಲ್ಲಿ ಪುರಾವೆಯಿಲ್ಲ. ಏಕೆಂದರೆ ಅವರು ತಮ್ಮ ಬಟ್ಟೆಯ ಕಡೆಗೆ ಗಮನ ನೀಡಿದರೆ ಖಂಡಿತ ಅವರನ್ನು ಅದನ್ನು ಎತ್ತಿಕೊಂಡು ನಡೆಯುತ್ತಿದ್ದರು. ಅವರಿಗೆ ಅದರ ಕಡೆ ಗಮನವೂ ಇಲ್ಲ. ಅದು ಅವರಿಗೆ ಬೇಕಾಗಿಯೂ ಇಲ್ಲ.

☆ ಹೇಗೆ ಬಟ್ಟೆ ಧರಿಸಬೇಕು?

ಅಬೂ ಸಈದ್ ಅಲ್‌ಖುದ್ರಿ(ರ) ರಿಂದ ವರದಿ.


ಪ್ರವಾದಿ(ಸ) ಹೇಳುತ್ತಾರೆ:

«إِزْرَةُ الْمُسْلِمِ إِلَى أَنْصَافِ سَاقَيْهِ، لَا جُنَاحَ

عَلَيْهِ مَا بَيْنَهُ وَبَيْنَ الْكَعْبَيْنِ، مَا أَسْفَلَ مِنَ الْكَعْبَيْنِ فِي النَّارِ».

“ಮುಸಲ್ಮಾನನು ಧರಿಸುವ ಬಟ್ಟೆ ಕಣಕಾಲಿನ ಅರ್ಧದವರೆಗೆ ಇರಬೇಕು. ಅದು ಅದಕ್ಕಿಂತ ಕೆಳಗೆ ಮತ್ತು ಹರಡು ಗಂಟುಗಳಿಗಿಂತ ಮೇಲಿದ್ದರೆ ಅದರಲ್ಲಿ ದೋಷವಿಲ್ಲ. ಆದರೆ ಯಾರ ಬಟ್ಟೆ ಹರಡುಗಂಟಿಗಿಂತ ಕೆಳಗಿ ಇಳಿಯುತ್ತದೋ ಅದು ನರಕದಲ್ಲಾಗಿದೆ.” (ಅಬೂದಾವೂದ್ 4093, ಇಬ್ನ್ ಮಾಜ 3573)

ಬಟ್ಟೆ ಹೇಗೆ ಧರಿಸಬೇಕೆಂದು ಪ್ರವಾದಿ(ಸ) ರವರು ಈ ಹದೀಸಿನಲ್ಲಿ ಸ್ಪಷ್ಟವಾಗಿ ವಿವರಿಸುತ್ತಾರೆ. ಬಟ್ಟೆ ಧರಿಸಬೇಕಾದುದು ಕಣಕಾಲಿನ ಅರ್ಧಭಾಗದಿಂದ ಕೆಳಗೆ ಮತ್ತು ಕಾಲಿನ ಹರಡುಗಂಟುಗಳಿಗಿಂತ ಮೇಲೆ. ಈ ಎರಡು ಗಡಿಗಳ ನಡುವೆ ಎಷ್ಟು ಬೇಕಾದರೂ ಬಟ್ಟೆಯನ್ನು ಇಳಿಸಬಹುದಾಗಿದೆ. ಆದರೆ ಅದು ಹರಡುಗಂಟಿಗಿಂತ ಕೆಳಗೆ ಇಳಿಯಬಾರದು. ಹರಡುಗಂಟಿಗಿಂತ ಕೆಳಗೆ



ಇಳಿದರೆ ಅದು ನರಕದಲ್ಲಾಗಿದೆ.

ಇಬ್ನ್ ಬಾಝ್ ಹೇಳುತ್ತಾರೆ: “ಅವನು ಒಂದು ವಾತಾವರಣದಲ್ಲಿದ್ದು ಆ ವಾತಾವರಣವು ಕಣಕಾಲಿನ ಅರ್ಧದ ವರೆಗೆ ಬಟ್ಟೆ ಎತ್ತಿಕಟ್ಟುವುದು ಕೊರತೆಯಾಗಿ ಕಾಣುವುದಾದರೆ, ಅಥವಾ ಹಾಗೆ ಕಟ್ಟುವುದರಿಂದ ಅವನಿಗೆ ಕಿರುಕುಳವಾಗುವುದಾದರೆ, ಕಣಕಾಲಿನ ಅರ್ಧದ ವರೆಗೆ ಬಟ್ಟೆಯನ್ನು ಎತ್ತಬೇಕಾಗಿಲ್ಲ. ಅಲ್ಲಾಹನಿಗೆ ಸ್ತುತಿ, ಇದರಲ್ಲಿ ಅವನಿಗೆ ರಿಯಾಯಿತಿಯಿದೆ. ಅವನು ಅದನ್ನು ಹರಡುಗಂಟಿನ ತನಕ ಇಳಿಬಿಡಬಹುದು.

ಅಲ್ಲಾಹನಿಗೆ ಸ್ತುತಿ. ಅವನಿಗೆ ಆ ಕಿರುಕುಳದಿಂದ ಪಾರಾಗಬಹುದು. ಹರಡುಗಂಟಿನ ತನಕ ಇಳಿಬಿಡುವುದರಲ್ಲಿ ತೊಂದರೆಯಿಲ್ಲ. ಏಕೆಂದರೆ ಅದು ಸುನ್ನತ್ತಾಗಿದೆ ಮತ್ತು ಅಪೇಕ್ಷಣೀಯವಾಗಿದೆ. ಆದರೆ ಹರಡುಗಂಟಿಗಿಂತ ಕೆಳಗೆ ಇಳಿಬಿಡುವುದು ನಿಷಿದ್ಧವಾಗಿದೆ. ಹೌದು ಅದು ನಿಷಿದ್ಧವಾಗಿದೆ. ಆದರೆ ಹರಡುಗಂಟಿಗಿಂತ ಮೇಲೆ ಕಣಕಾಲಿನ ಅರ್ಧದಿಂದ ಕೆಳಗೆ ಇಳಿಬಿಡುವುದು ತೊಂದರೆಯಿಲ್ಲ. (ಶೈಖ್‌ರವರ ಧ್ವನಿಮುದ್ರಣದಿಂದ)